ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸೆಷನ್ಸ್ ಕೇಸ್ ನಂಬರ್ : 252/2022**

**ಫ್ರಾಸಾ- 13 ಚಾಸಾ- 24**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಡಾಃ ಸಂತೋಷ್ ಕುಮಾರ್ |
| ತಂದೆಯ ಹೆಸರುಃ | : | ಶಿವಣ್ಣ ಬಿ ಎಸ್ |
| ವಯಸ್ಸುಃ | : | 49 ವರ್ಷ |
| ಉದ್ಯೋಗಃ | : | ತಜ್ಞರು, ಹಿಮ್ಸ್ ಹಾಸನ |
| ವಾಸ | : | ಹಾಸನ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ:23-08-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ನಾನು 2016ರಿಂದ ಇಲ್ಲಿಯವರೆಗೆ ಹಾಸನ ಹಿಮ್ಸ್ ನಲ್ಲಿ ತಜ್ಞನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2.ದಿಃ 27-6-22 ರಂದು ನಾನು ಹಿಮ್ಸ್ ಆಸ್ಪತ್ರೆಯ ನ್ಯಾಯ ವೈದ್ಯ ವಿಭಾಗದಲ್ಲಿ ಕರ್ತವ್ಯದಲ್ಲಿದ್ದಾಗ ಈ ಪ್ರಕರಣಕ್ಕೆ ಸಂಬಂಧಿಸಿಂತೆ ಆನಂದ ಎಂಬುವರ ಮೃತದೇಹದ ಶವಪರೀಕ್ಷೆಯನ್ನು ನಡೆಸಿಕೊಡುವಂತೆ ಆಲೂರು ಪಿ ಎಸ್ ನ ಆಉನಿ ರವರು ಅದೇ ದಿನಾಂಕ ಕೋರಿಕೆ ಪತ್ರವನ್ನು ಪಿಸಿ173ರವರ ಮೂಲಕ ಕಳುಹಿಸಿಕೊಟ್ಟದ್ದನ್ನು ಸ್ವೀಕರಿಸಿದೆನು. ಅದೇ ದಿನ ಆಸ್ಪತ್ರೆಯ ಶವಾಗಾರದಲ್ಲಿದ್ದ 45 ವರ್ಷ ವಯಸ್ಸಿನ ಆನಂದ್ ಎಂಬುವವರ ಮೃತದೇಹದ ಶವಪರೀಕ್ಷೆಯನ್ನು ಸಾಯಂಕಾಲ 6-15 ರಿಂದ 7-30 ಗಂಟೆಯವರೆಗೆ ನಡೆಸಿದೆನು. ನಾನು ಪರಿಶೀಲಿಸಿದಾಗ ಶವದ ಮೇಲೆ ಈ ಕೆಳಕಂಡ ಬಟ್ಟೆಗಳು ಇದ್ದವು.

ನೀಲಿಚೌಕಳಿಯ ಪಂಚೆ, ಸಿಮೆಂಟ್ ಮತ್ತು ಕಪ್ಪುಬಣ್ಣದ ಅಲ್ಲಲ್ಲಿ ಹರಿದ ಶರ್ಟು, ಕೆಂಪು ಬಣ್ಣದ ಒಳಉಡುಪು ಇದ್ದವು. ಅವುಗಳನ್ನು ಸಂಗ್ರಹಿಸಿ ಪೊಲೀಸರಿಗೆ ಕೊಟ್ಟಿರುತ್ತೇನೆ. ಹೊಟ್ಟೆಯ ಬಲಭಾಗ ನೀಲಿಬಣ್ಣಕ್ಕೆ ತಿರುಗಿದಂತೆ ಕಾಣುತ್ತಿತ್ತು. ಈ ಕೆಳಕಂಡ ಬಾಹ್ಯ ಗಾಯಗಳು ಕಂಡುಬಂದವು.

1.Lacerated wound 1 x 1 cm x scalp deep over top of the head with defused boggy swelling

2.abrasion wound 2 x 2 cms over outer aspect of left eye

3.Contusion wound 8 x 6 cm over lower 1/3 of left forearm with fracture of underlying bone.

4.Multiple abrasion measuring 3 x 2 cm to 0.25 x 0.5 cms over entire length left forearm

5.Abrasion measuring 2 x 1 cm is present over left knee

6.Multiple abrasion 2 x 2 cm to 0.5 x 0.5 cm over entire length of right leg

7.contusion measuring 6 x 4 cm over lower 1/3 of right leg with fracture of underlying bone.

8.Multiple abrasion measuring 3 x 2 cm to 1 x 1 cm over entire back.

9.Abrasion 9 x 5 cms over upper 1/3 of right forearm with fracture of underlying bone.

10.Superficial laceration measuring 0.5 x 0.5 cms over inner aspect lower lip corresponding to the left lower incisors

11.Superficial laceration measuring 0.5 x 0.5 cm over inner aspect lower lip corresponding to the right lower incisors.

ದೇಹವನ್ನು ಛೇದಿಸಿದಾಗ ತಲೆಯ ಚರ್ಮದಲ್ಲಿ ಎಲ್ಲಾ ಭಾಗದಲ್ಲೂ ರಕ್ತಸ್ರಾವವಾಗಿತ್ತು. ತಲೆಯ ನೆತ್ತಿಯಿಂದ(Bregma| ಎಡಕಿವಿಯ ಕೆಳಭಾಗದವರೆಗೆ ಮೂಳೆಮುರಿತ ಕಂಡುಬಂತು. ಮೆದುಳಿನ ಮೇಲೆ ರಕ್ತಸ್ರಾವವಿತ್ತು. ಎದೆಯ ಭಾಗವನ್ನು ಪರೀಕ್ಷಿಸಿದಾಗ ಎದೆಯ

ಹಿಂಭಾಗದಲ್ಲಿ ರಕ್ತಸ್ರಾವವಿತ್ತು. ಎದೆಯ ಇತರ ಅಂಗಗಳು ಸುಸ್ಥಿತಿಯಲ್ಲಿದ್ದವು. ಹೊಟ್ಟೆ ಸುಸ್ಥಿತಿಯಲ್ಲಿದ್ದವು. ಎರಡೂ ಮೂತ್ರಪಿಂಡಗಳಲ್ಲಿ contusion ಇತ್ತು. ಈ ಎಲ್ಲಾ ಗಾಯಗಳು ಮರಣಪೂರ್ವ ಗಾಯಗಳಾಗಿರುತ್ತವೆ ಮತ್ತು ತಾಜಾ ಗಾಯಗಳಾಗಿದ್ದವು. ಮರಣವು ಶವಪರೀಕ್ಷೆ ಮಾಡುವುದಕ್ಕಿಂತ ಸುಮಾರು 18 ರಿಂದ 36 ಗಂಟೆ ಒಳಗಡೆ ಸಂಭವಿಸಿರುತ್ತದೆ. ಶವಪರೀಕ್ಷೆ ಸಮಯದಲ್ಲಿ ವಿಸೆರಾ ಸಂಗ್ರಹಿಸಿ ಪೊಲೀಸರಿಗೆ ಕೊಟ್ಟಿರುತ್ತೇನೆ.ಸದರಿ ಮರಣವು ತಲೆಗೆ ಆದ ಗಾಯದಿಂದ ಸಂಭವಿಸಿದೆ ಎಂದು ಅಭಿಪ್ರಾಯಪಟ್ಟು ಈ ಎಲ್ಲಾ ವಿಚಾರಗಳನ್ನು ನಮೂದಿಸಿ ಶವಪರೀಕ್ಷಾ ವರದಿಯನ್ನು ನಿಪಿ-20ರಂತೆ ನೀಡಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-20(ಎ) ಎಂದು ಗುರುತಿಸಲಾಯಿತು. ಮೃತ ದೇಹದಲ್ಲಿ ಕಂಡುಬಂದ ಎಲ್ಲಾ ಗಾಯಗಳು ಈಗ ನನಗೆ ತೋರಿಸಿದ ನ್ಯಾಯಾಲಯದ ಮುಂದಿರುವ ಎಂ.ಒ.2 ದೊಣ್ಣೆ ಮತ್ತು ಎಂ.ಒ.3 ಸುತ್ತಿಗೆಯಿಂದ ಹಲ್ಲೆ ಮಾಡಿದರೆ ಆಗುವ ಸಾಧ್ಯತೆ ಇರುತ್ತದೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

ನಾನು ಆನಂದ್ ಎಂಬುವವರ ಶವಪರೀಕ್ಷೆ ನಡೆಸಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಹೇಳಿದಂತೆ ನಿಪಿ-20ರ ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ಬೈಕಿನಲ್ಲಿ ಬಿದ್ದರೆ ನಿಪಿ-20ರಲ್ಲಿ ಕಾಣಿಸಿದ ಗಾಯಗಳು ಆಗುತ್ತವೆ ಎಂದರೆ ಸರಿಯಲ್ಲ. ಕೇಸಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**